ಮೆಟ್ರಿಕ್ ಟನ್‌ಗಳ ಪೈಕಿ ೭೫೦ ಮೆಟ್ರಿಕ್ ಟನ್‌ಗಳನ್ನು ೧ ಕೆ.ಜಿ. ಚೀಲಗಳಲ್ಲಿ ಬಿಡುಗಡೆ ಮಾಡಬೇಕೆಂದು ಕೇಂದ್ರ ಸರ್ಕಾರವು ಆದೇಶವಿತ್ತಿದೆ ಈ ಕಾರಣಗಳಿಂದಾಗಿ ಪಡಿತರ ಚೀಟಿದಾರರಿಗೆ ಬಿಡುಗಡೆ ಮಾಡಲು ಬಹಳ ಕಡಿಮೆ ಪ್ರಮಾಣದ ತಾಳೆ ಎಣ್ಣೆಯು ಈಗ ಸಿಗುತ್ತಿದೆ. ಈ ಕಡಿಮೆ ಪ್ರಮಾಣದ ಎಣ್ಣೆಯನ್ನು ಪಟ್ಟಣ ಪ್ರದೇಶಗಳಿಗೆ ಪಡಿತರ ಚೀಟಿಯೊಂದಕ್ಕೆ ೩೦೦ ಗ್ರಾಂನಂತೆಯೂ ಮತ್ತು ಗ್ರಾಮಾಂತರ ಪ್ರದೇಶಗಳಿಗೆ ಪಡಿತರ ಚೀಟಿಯೊಂದಕ್ಕೆ ೧೦೦ ಗ್ರಾಂನಂತೆಯೂ ಬಿಡುಗಡೆ ಮಾಡಲಾಗಿದೆ,

ಈ ಮೇಲಿನ ಕಾರಣಗಳಿಂದಾಗಿ ಚಿಕ್ಕ ಪೇರಸಭೆಗಳ ಹಾಗೂ ಗ್ರಾಮೀಣ ಪ್ರದೇಶಗಳಲ್ಲಿ ತಾಳೆ ಎಣ್ಣೆಯ ಕೊರತೆಯು ಉಂಟಾಗಿರುವುದು ಸಹಜ. ಇದೇ ಕಾರಣಕ್ಕಾಗಿ ಉಡುಪಿ ನಗರದಲ್ಲೂ ತಾಳೆ ಎಣ್ಣೆ ಹಂಚಿಕೆ ಕಡಿಮೆ ಆಗಿರುವ ಸಂಭವವಿರುತ್ತದೆ. ಕೇಂದ್ರ ಸರ್ಕಾರವು ಹೆಚ್ಚುವರಿ ಖಾದ್ಯ ತೈಲವನ್ನು ರಾಜ್ಯಕ್ಕೆ ಬಿಡುಗಡೆ ಮಾಡಿದರೆ ಮಾತ್ರ ಸಾಕಷ್ಟು ಪ್ರಮಾಣದಲ್ಲಿ ಪಡಿತರ ಚೀಟಿದಾರರಿಗೆ ನೀಡಲು ಸಾಧ್ಯವಾಗುತ್ತದೆ. ಇಲ್ಲದಿದ್ದರೆ ಆದೇ ಕೊರತೆಯು ಮುಂದುವರಿಯುತ್ತದೆ,

೩. ಉಡುಪಿ ತಾಲ್ಲೂಕಿನ ಕೋಟಗೋಳಿಯಂಗಡಿ ಮತ್ತು ಕೊಳಲಗಿರಿ ಪೆರ್ಡೂರು ರಸ್ತೆಯ ಮಾರ್ಗಗಳ ಅಭಿವೃದ್ಧಿ

ಶ್ರೀ ಬಸವರಾಜ್ (ಬ್ರಹ್ಮಾವರ).—ಮಾನ್ಯ ಅಧ್ಯಕ್ಷರೆ, ದಕ್ಷಿಣ ಕನ್ನಡ ಜಿಲ್ಲೆಯ ಉಡುಪಿ ತಾಲ್ಲೂಕಿನ ಉತ್ತರ ಭಾಗದಲ್ಲಿ ಕರಾವಳಿಯಿಂದ ಮಲೆನಾಡಿನವರೆಗೆ ಸಂಪರ್ಕ ಕಲ್ಪಿಸುವ ಪ್ರಮುಖ ಮಾರ್ಗ ಕೋಟಗೋಳಿಯಂಗಡಿ ರಸ್ತೆ ಮತ್ತು ಕೊಳಲಗಿರಿ ಪೆರ್ಡೂರು ರಸ್ತೆ, ಈ ರಸ್ತೆಯ ಸ್ವಲ್ಪ ಭಾಗ ಮಾತ್ರ ಅಭಿವೃದ್ಧಿ ಆಗಿದ್ದು ಮಲೆನಾಡಿನ ಹಳ್ಳಿಗಳ ಮೂಲಕ ಹಾದು ಹೋಗುವ ಭಾಗದ ಅವಸ್ಥೆ ಶೋಚನೀಯವಾಗಿದೆ. ಈ ವಿಚಾರದಲ್ಲಿ ಕಳೆದ ಕೆಲವು ವರ್ಷಗಳಿಂದ ಸಂಬಂಧಪಟ್ಟ ಇಲಾಖೆಯು ಮುಂದೆ ಹಾಗೂ ವಿಧಾನ ಸೌಧದಲ್ಲಿ ನಮ್ಮ ಸತತ ಪ್ರಸ್ತಾಪಕ್ಕೆ ಮಂಂದಿನ ವರ್ಷದಲ್ಲಿ ಖಂಡಿತ ಕ್ರಮ ಕೈಗೊಳ್ಳಲಾಗುವುದೆಂಬ ಭರವಸೆ ಸಿಕ್ಕಿದ್ದರೂ, ನಾವು ಕಂಡಿದ್ದು ಮಾತ್ರ ಎಲ್ಲ ಕಡೆಗಳಿಂದಲೂ ಈ ವಿಚಾರದಲ್ಲಿ ಸಂಪೂರ್ಣ ಕ್ರಿಯಾಲೋಪ ಪರಿಣಾಮವಾಗಿ ಆ ಪ್ರದೇಶದ ಜನರಿಗೆ ಕೋಪ, ಸರ್ಕಾರಕ್ಕೆ ಶಾಪ, ಶಾಸಕರಿಗೆ ತಾಪ ಇವುಗಳನ್ನೆಲ್ಲಾ ನಿವಾರಿಸಲು ಒಂದೇ ದಾರಿ ಕೋಟಗೋಳಿಯಂಗಡಿ ಮತ್ತು ಕೊಳಲಗಿರಿ ಪೆರ್ಡೂರು ಮಾರ್ಗಗಳನ್ನು ಸಂಪೂರ್ಣ ಅಭಿವೃದ್ಧಿಪಡಿಸಿ ತಾರಿನ ಹೊದಿಕೆ ಹಾಕಿಸುವುದು. ಈ ವಿಚಾರದಲ್ಲಿ ಸೂಕ್ತ ಕ್ರಮಕ್ಕಾಗಿ ಒತ್ತಾಯಿಸುತ್ತೇನೆ.

ಪ್ರೊ ಎ. ಲಕ್ಷ್ಮೀಸಾಗರ್ (ಕಾನೂನು ಹಾಗೂ ಸಂಸದೀಯ ವ್ಯವಹಾರಗಳ ಸಚಿವರು).—ಮಾನ್ಯ ಸಭಾಧ್ಯಕ್ಷರೆ, ಮಾನ್ಯ ಸದಸ್ಯರಿಗೆ ಇದರ ಬಗ್ಗೆ ಉತ್ತರವನ್ನು ತರಿಸಿಕೊಡುತ್ತೇನೆ.

೪. ಬಂಟ್ವಾಳ ತಾಲ್ಲೂಕಿಗೆ ಮಂಗಳೂರಿನಿಂದ ನೇರವಾಗಿ ವಿದ್ಯುತ್ ಸರಬರಾಜಿನ ವ್ಯವಸ್ಥೆಯಲ್ಲಿ ವಿಳಂಬ

ಶ್ರೀ ಬಿ. ಎ. ಉಮರಬ್ಬ (ವಿಧ್ಲ).—ಮಾನ್ಯ ಅಧ್ಯಕ್ಷರೆ, ದಕ್ಷಿಣ ಕನ್ನಡ ಜಿಲ್ಲೆಯ ಬಂಟ್ವಾಳ ತಾಲ್ಲೂಕಿಗೆ ಮಂಗಳೂರಿನಿಂದ ನೇರವಾಗಿ ವಿದ್ಯುತ್ ಸರಬರಾಜಾಗುತ್ತಿದ್ದು ಕೆಲವು ಕಾರಣಗಳಿಂದ ನಿವಿತ್ತ ಇದನ್ನು ಪುತ್ತೂರು ಮೂಲಕ ಸರಬರಾಜನ್ನು ತಾತ್ಕಾಲಿಕ ಎಂಬ ನೆಲೆಯಲ್ಲಿ ಹಲವಾರು ತಿಂಗಳಿಂದ ಮಾಡಲಾಗುತ್ತಿದೆ. ಇದರ ಪರಿಣಾಮ ಬಂಟ್ವಾಳ ತಾಲ್ಲೂಕಿಗೆ ವಿದ್ಯುತ್ ಇದ್ದೂ ಇಲ್ಲದಂತಾಗಿದೆ. ವಿದ್ಯಾರ್ಥಿಗಳ ಪರೀಕ್ಷೆ. ರೈತರ ನೀರಿನ ಸಮಸ್ಯೆ ತೀವ್ರವಾಗಿದೆ, ಮಂಗಳೂರಿನಿಂದ ನೇರ ಸರಬರಾಜಿನ ಈ ತೀವ್ರ ವಿಳಂಬದ ಕಾರಣವೇನು? ಇದನ್ನು ಯಾವಾಗ ಸರಿಪಡಿಸಲಾಗುತ್ತದೆ ಎಂಬುದನ್ನು ಮಾನ್ಯ ವಿದ್ಯುತ್ ಸಚಿವರಿಂದ ನಿರ್ದಿಷ್ಟವಾಗಿ ತಿಳಿಯಬಯಸುತ್ತೇನೆ.

ಶ್ರೀ ಪಿ. ಜಿ. ಆರ್. ಸಿಂಧ್ಯ (ಮಾನ್ಯ ವಿದ್ಯುತ್ ಖಾತೆಯ ಸಚಿವರ ಪರವಾಗಿ).—ಮಾನ್ಯ ಅಧ್ಯಕ್ಷರೆ, ಮಾನ್ಯ ವಿದ್ಯುತ್ ಖಾತೆಯ ಸಚಿವರಿಗೆ ಗಂಟಲಿನ ತೊಂದರೆ ಇರುವುದರಿಂದ ಅವರ ಪರವಾಗಿ ನಾನು ಈ ಹೇಳಿಕೆಯನ್ನು ನೀಡುತ್ತೇನೆ.

ದಕ್ಷಿಣ ಕನ್ನಡ ಜಿಲ್ಲೆಯ ಬಂಟ್ವಾಳ ತಾಲ್ಲೂಕಿಗೆ ಹಾಲಿ ಪುತ್ತೂರು ಸ್ಟೇಷನ್‌ನಿಂದ ವಿದ್ಯುತ್ ಸರಬರಾಜಾಗುತ್ತಿದೆ. ಈ ಹಿಂದೆ ಇಲ್ಲಿಗೆ ಮಂಗಳೂರಿನಿಂದ ನೇರ ವಿದ್ಯುತ್ ಸರಬರಾಜಾಗುತ್ತಿತ್ತು. ಆದರೆ ಈ ೩೩ ಕೆ.ವಿ. ವಿದ್ಯುತ್ ಮಾರ್ಗದಲ್ಲಿ ಮಾರ್ಪಾಡು ಮಾಡಲು ಕ್ರಮ ಕೈಗೊಂಡಿದ್ದರಿಂದ ತಾತ್ಕಾಲಿಕವಾಗಿ ಪುತ್ತೂರು ಸ್ಟೇಷನ್‌ನಿಂದ ವಿದ್ಯುತ್ ಸರಬರಾಜು ಮಾಡಲಾಗುತ್ತಿದೆ. ಮಂಗಳೂರಿನಿಂದ ನೇರ

ವಿದ್ಯುತ್ ಸರಬರಾಜು ಮಾಡಲು ಹೊಸದಾಗಿ ೫೨ ಕೆ.ವಿ. ಲೈನು ಹಾಕಲಾಗಿದ್ದು ಅದನ್ನು ಸರ್ಕಾರದ ಮುಖ್ಯ ವಿದ್ಯುತ್ ಪರೀಕ್ಷಕರು ಪರೀಕ್ಷಿಸಿ ಕೆಲವು ನ್ಯೂನತೆಗಳನ್ನು ಗುರ್ತಿಸಿದ್ದು ಆ ನ್ಯೂನತೆಗಳನ್ನು ಈಗ ಸರಿಪಡಿಸಲಾಗಿದೆ. ಈ ಹೊಸ ವಿದ್ಯುತ್ ಮಾರ್ಗವನ್ನು ಇನ್ನೂ ಒಂದು ವಾರದೊಳಗೆ ಕಾರ್ಯ ನಿರತ ಮಾಡಲು ಕ್ರಮ ಕೈಗೊಂಡಿದೆ. ಇದಾದನಂತರ ಬಂಟ್ವಾಳ ತಾಲ್ಲೂಕಿನ ವಿದ್ಯುತ್‌ನ ಸರಬರಾಜಿನಲ್ಲಿ ಸುಧಾರಣೆ ಆಗುತ್ತದೆ.

೫ ಮಂಗಳೂರಿನಲ್ಲಿ ವಿದ್ಯುತ್ ವೋಲ್ಟೇಜಿನ ಏರಿಳಿತವನ್ನು ಸರಿಪಡಿಸಲು ಒತ್ತಾಯ

ಶ್ರೀ ಬ್ಲೇಸಿಯಸ್ ಎಂ. ಡಿಸೋಜ (ಮಂಗಳೂರು).—ಮಾನ್ಯ ಅಧ್ಯಕ್ಷರೇ. ಮಂಗಳೂರಿನಲ್ಲಿ ವಿದ್ಯುತ್ ಅವ್ಯವಸ್ಥೆ, ವೋಲ್ಟೇಜ್ ಏರಿಳಿತ, ಪೂರೈಕೆಯಲ್ಲಿ ಕಣ್ಣುಮುಚ್ಚಾಲೆ, ಇದರಿಂದ ಮನೆ ಮಂದಿ ಗೆಲ್ಲಾ ತೊಂದರೆ. ನೇತ್ರಾವತಿ ನದಿಯಲ್ಲಿ ನೀರಿಗೆ, ಪಂಪಿಗೆ ಪವರ್ ಇಲ್ಲ. ಹಂಗಾಗಿ ನೀರು ಪೂರೈಕೆ ಸರಿಯಾಗಿಲ್ಲ. ವಿದ್ಯುತ್ ಆಧಾರಿತ ಚಿಕ್ಕ ಉದ್ದಿಮೆಂಗಳಿಗೆ ತೊಂದರೆ. ಉತ್ಪಾದನೆ ಕಡಿತ. ಇದರಿಂದ ಪ್ರತಿದಿನ ಸಹಸ್ರಾರು ರೂಪಾಯಿಗಳ ನಷ್ಟ. ಇದು ಪರೀಕ್ಷೆಯ ಕಾಲ. ವಿದ್ಯಾರ್ಥಿಗಳು ಕಷ್ಟಪಟ್ಟು ರಾತ್ರಿ ಓದಬೇಕು. ಅವರ ಜೀವನದ ಪರೀಕ್ಷಾ ಕಾಲ. ಆದರೆ ವಿದ್ಯಾರ್ಥಿಗಳನ್ನು ವಿದ್ಯುತ್ ಇಲ್ಲದೆ ಪರೀಕ್ಷೆ ಮಾಡುತ್ತಿದೆ. ಮೇಣದ ಬತ್ತಿಯ ಬೆಳಕಿನಲ್ಲಿ ಓದಿ ವಿದ್ಯಾರ್ಥಿಗಳ ಕಣ್ಣು ಕೂಡ ಹಾನಿ. ಬಾಳಿಗೂ ಹಾನಿ. ಒಟ್ಟಾರೆ ಮಂಗಳೂರಿನಲ್ಲಿ ವಿದ್ಯುತ್ ಇಲಾಖೆಯ ಮೇಲೆ ಮನೆ ಮಂದಿಯೆಲ್ಲಾ ಹಾಕುತ್ತಿದ್ದಾರೆ ಶಾಪ, ಜನಕ್ಕೆಲ್ಲಾ ಕೋಪ, ಕರೆಂಟಿನ ತಾಪತ್ರಯದಿಂದ ಬದುಕಿಗೇ ತಾಪ. ಈ ವ್ಯವಸ್ಥೆಯನ್ನು ಕೂಡಲೇ ಸರಿಪಡಿಸಿ ಎಂದು ಅನುತಾಪದಿಂದ ಒತ್ತಾಯಿಸುತ್ತಿದ್ದೇನೆ. ಈ ವಿಚಾರದಲ್ಲಿ ಒಂದೆರಡು ತಿಂಗಳ ಹಿಂದೆ ಸಚಿವರಿಗೆ ತಾರು ಕೊಟ್ಟಿದ್ದೆ. ಮಾರುತ್ತರ ಇಲ್ಲ, ಪರಿಸ್ಥಿತಿ ಹಾಗೆಯೇ ಇದೆ. ಮಂತ್ರಿಗಳು ಬದಲಾದ್ದರಿಂದ ಈ ವ್ಯವಸ್ಥೆಯೂ ಬದಲಾಗಲಿ, ಕರೆಂಟಿನ ಕಣ್ಣಾಮುಚ್ಚಾಲೆ ನಿಲ್ಲಲಿ. ಜನರ ತಾಪ ಶಾಂತವಾಗಲಿ ಎಂದು ಹಾರೈಸುತ್ತೇನೆ.

ಶ್ರೀ ಪಿ.ಜಿ.ಆರ್. ಸಿಂಧ್ಯ. (ಮಾನ್ಯ ವಿದ್ಯುತ್ ಖಾತೆ ಸಚಿವರ ಪರವಾಗಿ).—ಮಾನ್ಯ ಅಧ್ಯಕ್ಷರೆ, ಮಾನ್ಯ ವಿದ್ಯುತ್ ಖಾತೆಯ ಸಚಿವರಿಗೆ ಗಂಟಲಿಗೆ ತೊಂದರೆ ಇರುವುದರಿಂದ ಅವರ ಪರವಾಗಿ ನಾನು ಈ ಹೇಳಿಕೆಯನ್ನು ಕೊಡಬಯಸುತ್ತೇನೆ.

ಮಂಗಳೂರಿಗೆ ವಿದ್ಯುತ್ ಪೂರೈಕೆ ಶಿವಮೊಗ್ಗದಿಂದ ಆಗುತ್ತಿದೆ. ಸೆಪ್ಟೆಂಬರ್ ೧೯೮೮ರಲ್ಲಿ ವಿದ್ಯುತ್ ಕಡಿತದಿಂದ ಕೆಲವು ಗ್ರಾಹಕರಿಗೆ ಪೂರ್ಣ ನಿಲ್ಲಿಸಿ, ಕೆಲವು ಹೆಚ್ ಟಿ ಗ್ರಾಹಕರಿಗೆ ಸರಬರಾಜಿನ ಪ್ರಮಾಣ ಕಡಿಮೆ ಮಾಡಲಾಯಿತು. ಮಳೆಗಾಲ ಮುಗಿದ ನಂತರ ನೀರಾವರಿ ಪಂಪುಸೆಟ್ಟುಗಳಲ್ಲಿನ ಬೇಡಿಕೆ ಗಮನಾರ್ಹವಾಗಿ ಏರಿತು. ಗ್ರಾಹಕರ ಬಳಕೆಯ ಪ್ರಮಾಣ ಏರಿದ್ದರಿಂದ ಬೇಡಿಕೆಯು ಲಭ್ಯವಿರುವ ಪ್ರಮಾಣವನ್ನು ಪೀಕ್ ಲೋಡ್ ವೇಳೆಗಳಲ್ಲಿ ಮೀರಿತು. ಇದರಿಂದಾಗಿ ಹಲವಾರು ಸ್ಟೇಷನ್ನುಗಳು, ಲೈನುಗಳು, ಓವರ್‌ಲೋಡ್ ಆಗಿ ವೋಲ್ಟೇಜ್‌ನಲ್ಲಿ ಕಡಿತ ಉಂಟಾಯಿತು. ಪರಿಸ್ಥಿತಿ ಸುಧಾರಿಸಲು ಗ್ರಾಮಾಂತರ ಫೀಡರ್‌ಗಳಲ್ಲಿ ಹಗಲಿನಲ್ಲಿ ೭ ಗಂಟೆಗಳ ಕಾಲ ವಿದ್ಯುತ್ ನಿಲುಗಡೆ ಮಾಡುವ ಕ್ರಮ ಜಾರಿಗೆ ತರಲಾಯಿತು. ಆದರೆ ಪಟ್ಟಣ, ನಗರಕ್ಕೆ ವಿದ್ಯುತ್ ಸರಬರಾಜು ಮಾಡುವ ಫೀಡರ್‌ಗಳಿಗೆ ಇದು ಅನ್ವಯಿಸಲಿಲ್ಲ. ಇಷ್ಟು ಕ್ರಮ ಕೈಗೊಂಡಾಗ್ಯೂ ಕೆಲವೆಡೆ ಓವರ್ ಲೋಡು ಸ್ಥಿತಿ ಉಂಟಾಗುತ್ತಿದೆ ಇದು ವಿರಳ. ಇಂಥ ಓವರ್‌ಲೋಡು ಪರಿಸ್ಥಿತಿ ಉಂಟಾದಾಗ ಪಟ್ಟಣ ನಗರ ಪ್ರದೇಶಗಳಿಗೂ ಅನಿಯಮಿತ ವಿದ್ಯುತ್ ನಿಲುಗಡೆ ಮತ್ತು ಕನಿಷ್ಠ ವೋಲ್ಟೇಜ್ ಮಾಡಲಾಗುತ್ತದೆ. ಇದನ್ನು ತುಂಬಾ ಅನಿವಾರ್ಯವಾದಾಗ ಮಾತ್ರ ಮಾಡಲಾಗುತ್ತದೆ. ಪರಿಸ್ಥಿತಿಯನ್ನು ಹತೋಟಿಯಲ್ಲಿಡಲು ಈ ಕ್ರಮ ಅಗತ್ಯ. ಆದ್ದರಿಂದ ಗ್ರಾಹಕರು ಮಂಡಲಿಯೊಡನೆ ಸಹಕರಿಸಬೇಕು. ಈ ಅನಿಯಮಿತ ಲೋಡ್ ಶೆಡ್ಡಿಂಗ್ ಅಗತ್ಯ ಬೀಳು ವೆಡೆಗಳಲ್ಲೆಲ್ಲಾ ಮಾಡಲಾಗುತ್ತದೆ.

೬ ರಾಜ್ಯದ ಭೂ ರಹಿತರು ಸರ್ಕಾರಿ ಭೂಮಿಯಲ್ಲಿ ಕೃಷಿ ಮಾಡುತ್ತಿದ್ದುದನ್ನು ಸಕ್ರಮಗೊಳಿಸುವುದು ಮತ್ತು ಟಿ.ಟಿ. ಮಸೂಲಿ ನಿಲುಗಡೆ

ಶ್ರೀ ಆರ್. ರಾಮಯ್ಯ.—ಮಾನ್ಯ ಅಧ್ಯಕ್ಷರೇ, ರಾಜ್ಯದಲ್ಲಿ ಸರ್ಕಾರಿ ಭೂಮಿಯಲ್ಲಿ ಭೂರಹಿತರು ಕೃಷಿ ಮಾಡುತ್ತಿದ್ದು ಇದನ್ನು ಸಕ್ರಮಗೊಳಿಸುವ ಆಲೋಚನೆ ಸರ್ಕಾರದಲ್ಲಿದ್ದು ಸಹ ಇವರಿಂದ ಟಿ.ಟಿ. ವಸೂಲು ಮಾಡುತ್ತಿರುವುದು ಯಾವ ನ್ಯಾಯ. ಈ ಹಿಂದೆ ಸರ್ಕಾರ ಇವರ ಭೂಮಿಯನ್ನು ಖಾಯಂಗೊಳಿಸುವಾಗ ಯಾವ ವಿಧದ ಕರವನ್ನು ವಿಧಿಸದೆ ಮಾಡಿಕೊಡುವ ಆಶ್ವಾಸನೆ ನೀಡಿ ಈ ರೀತಿ ನಡೆದು